**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 1795/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಯೋಗೀಶ ಎಂ.ಎಸ್. |
| ತಂದೆಯ ಹೆಸರು | : | ಶಿವನಂಜಯ್ಯ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪೋಲೀಸ್ ಪೇದೆ,<br>ಹೆಚ್.ಡಿ. ಕೋಟೆ ಪೋಲೀಸ್ ಠಾಣೆ |
| ವಾಸಸ್ಥಳ | : | ಹೆಚ್.ಡಿ. ಕೋಟೆ ಟೌನ್. |

**ಸಾಕ್ಷಿಯನ್ನು ದಿನಾಂಕಃ 23.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ರವರಿಂದಃ**

ನಾನು ದಿನಾಂಕಃ 30.08.2016 ರಿಂದ ಇಲ್ಲಿಯವರೆಗೆ ಹೆಚ್.ಡಿ. ಕೋಟೆ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 07.11.2020 ರಂದು ಮಧ್ಯಾಹ್ನ 01.00 ಗಂಟೆ ಸಮಯದಲ್ಲಿ ಚಾಸಾ-1 ರವರಿಗೆ ಹೆಚ್.ಡಿ. ಕೋಟೆ ತಾಲ್ಲೂಕಿನ ಹಳ್ಳದಮನುಗನಹಳ್ಳಿ ಗ್ರಾಮದ ಬಸ್ ನಿಲ್ದಾಣದಲ್ಲಿ ಒಬ್ಬ ವ್ಯಕ್ತಿ ಯಾವುದೇ ಪರವಾನಗಿ ಇಲ್ಲದೇ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಮದ್ಯ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟು, ಮದ್ಯ ಸೇವನೆ ಮಾಡಲು ಪ್ರಚೋದನೆ ನೀಡುತ್ತಿದ್ದಾರೆಂದು ಮಾಹಿತಿ

ಬಂದಿರುತ್ತದೆ. ನಂತರ ಈ ವಿಷಯವನ್ನು ಚಾಸಾ-1 ನಮಗೆ ತಿಳಿಸಿದ್ದು, ನಂತರ ಪಂಚರಾದ ಚಾಸಾ-2, ಚಾಸಾ-3, ನಾನು ಮತ್ತು ಚಾಸಾ-5 ರಿಂದ ಚಾಸಾ-8 ರವರು ಖಾಸಗಿ ವಾಹನದಲ್ಲಿ ಮಧ್ಯಾಹ್ನ 02.00 ಗಂಟೆಗೆ ಹಳ್ಳದಮನುಗನಹಳ್ಳಿ ಗೇಟ್ ನ ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿದ್ದ ವ್ಯಕ್ತಿಯನ್ನು ವಿಚಾರಿಸಿದಾಗ ಆತ ತನ್ನ ಹೆಸರು ಜಯಲಿಂಗ, ಜಿ.ಬಿ. ಸರಗೂರು ಗ್ರಾಮ ಎಂದು ತಿಳಿಸಿರುತ್ತಾನೆ. ನಂತರ ಅವನ ಬಳಿ ಇದ್ದ 4-5 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ವಶಪಡಿಸಿಕೊಂಡು, ಆರೋಪಿಯನ್ನು ವಶಕ್ಕೆ ಪಡೆದು ವಾಪಸ್ ಬರುವಾಗ ಕ್ಯಾತನಹಳ್ಳಿ ಗೇಟ್ ಬಳಿ ಚಾಸಾ-1 ರವರಿಗೆ ಬಾತ್ಮೀದಾರರು ಸಿಕ್ಕಿ ಗಂಗಡಹೊಸಹಳ್ಳಿಯ ಅರಳೀಮರದ ಹತ್ತಿರವಿರುವ ಪೆಟ್ಟಿಗೆ ಅಂಗಡಿಗಳಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ನೀಡಿದ್ದರಿಂದ ನಮ್ಮ ಜೊತೆ ಇದ್ದ ಪಂಚರನ್ನು ಕರೆದುಕೊಂಡು ಎಲ್ಲರು ಸೇರಿ ಮಧ್ಯಾಹ್ನ 03.45 ಗಂಟೆಗೆ ಗಂಗಡಹೊಸಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಇರುವ ಅರಳೀಮರದ ಹತ್ತಿರ ಇದ್ದ 01 ಪೆಟ್ಟಿಗೆ ಅಂಗಡಿಗೆ ಹೋಗಿ, ದಾಳಿ ನಡೆಸಿ ನಂಜುಂಡೇಗೌಡ ಎಂಬುವವರನ್ನು ವಶಕ್ಕೆ ಪಡೆದು, ಅವರ ಅಂಗಡಿಯಲ್ಲಿದ್ದ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ವಶಪಡಿಸಿಕೊಂಡು, ಮಹಜರ್ ಕ್ರಮ ಜರುಗಿಸಿ, ನಂತರ ಅವರ ಅಂಗಡಿಯಿಂದ 100-150 ಅಡಿ ದೂರದಲ್ಲಿದ್ದ ಮತ್ತೊಂದು ಪೆಟ್ಟಿಗೆ ಅಂಗಡಿಗೆ ಸಂಜೆ 05.00 ಗಂಟೆಗೆ ಹೋಗಿ ಆ ಅಂಗಡಿಯಲ್ಲಿದ್ದ ವ್ಯಕ್ತಿಯನ್ನು ವಿಚಾರಿಸಿದಾಗ ಆತ ತನ್ನ ಹೆಸರು ಶೆಟ್ಟಿಗೌಡ ಬಿನ್ ನಿಂಗೇಗೌಡ ಎಂದು ತಿಳಿಸಿದ್ದು, ನಂತರ ಅಂಗಡಿಯನ್ನು ಪರಿಶೀಲಿಸಿದಾಗ ಅಂಗಡಿಯ ಒಳಗಿದ್ದ 01 ಚೀಲದಲ್ಲಿ ಓಲ್ಡ್ ಟ್ಯಾವರಿನ್ ಎಂದು ಲೇಬಲ್ ಇದ್ದ 180 ಎಂ.ಎಲ್.ನ 04 ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಮತ್ತು ಒರಿಜಿನಲ್ ಚಾಯ್ಸ್

ಡಿಲಕ್ಸ್ ವಿಸ್ಕಿ ಎಂದು ಲೇಬಲ್ ಇದ್ದ 90 ಎಂ.ಎಲ್. ನ 30 ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಇದ್ದವು. ನಂತರ ಅತನನ್ನು ಪರವಾನಗಿ ಬಗ್ಗೆ ಕೇಳಿದಾಗ ಆತನ ಬಳಿ ಯಾವುದೇ ಪರವಾನಗಿ ಇರುವುದಿಲ್ಲವೆಂದು ತಿಳಿಸಿರುತ್ತಾನೆ. ನಂತರ ಸ್ಥಳದಲ್ಲಿ ಎಲ್ಲಾ ಮಧ್ಯದ ಪ್ಯಾಕೆಟ್ ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ, ಬಿಳಿ ಬಟ್ಟೆಯಿಂದ ಸುತ್ತಿ, ಮೊಹರು ಹಾಕಿ, **A** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಿ, ಸ್ಥಳದಲ್ಲಿ ಮಹಜರ್ ಜರುಗಿಸಿ ಎಲ್ಲಾ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸ್ಥಳದಲ್ಲಿ ಜರುಗಿಸಿದ ಮಹಜರ್ ನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಅಮಾನತ್ತು ಮಹಜರ್ ನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಲಸಾಯಿತು. ನಾನು ಈ ಬಗ್ಗೆ ನಮ್ಮ ಮೇಲಾಧಿಕಾರಿಗಳಿಗೆ ಹೇಳಿಕೆ ನೀಡಿರುತ್ತೇನೆ. ನಾವು ವಶಪಡಿಸಿಕೊಂಡ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಓಲ್ಡ್ ಟ್ಯಾವರಿನ್ ಎಂದು ಲೇಬಲ್ ಇರುವ 180 ಎಂ.ಎಲ್.ನ 04 ಮಧ್ಯದ ಟೆಟ್ರಾ ಪ್ಯಾಕೆಟ್ ಗಳು ಮತ್ತು ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂದು ಲೇಬಲ್ ಇರುವ 90 ಎಂ.ಎಲ್. ನ 30 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮುದ್ದೆಮಾಲು-1 ರಿಂದ ಮುದ್ದೆಮಾಲು-34 ಎಂದು ಗುರುತಿಸಲಾಯಿತು. ಸಾಕ್ಷಿಯು 01 ಪ್ಲಾಸ್ಟಿಕ್ ಚೀಲವನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ಮುದ್ದೆಮಾಲು-35 ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಈ ದಿನ ಗೈರು ಹಾಜರಾಗಿದ್ದು, ಮಾನ್ಯ ಆರೋಪಿ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಆರೋಪಿಯ ಗುರುತಿಸುವಿಕೆಯ

ಬಗ್ಗೆ ಯಾವುದೇ ತಕರಾರು ಇಲ್ಲವೆಂದು ಹೇಳಿದ್ದರಿಂದ ಸದರಿ ವಿನಾಯಿತಿ ಅರ್ಜಿಯನ್ನು ಮನ್ನಿಸಲಾಯಿತು

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಎಸ್.ಎನ್. ವಕೀಲರಿಂದಃ**

ನಾನು ದಿನಾಂಕಃ 07.11.2020 ರಂದು ಗುಪ್ತ ಮಾಹಿತಿ ಸಿಬ್ಬಂಧಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾವು ಖಾಸಗಿ ವಾಹನವಾದ ವಿಂಗರ್ ನಲ್ಲಿ ಹೋಗಿರುತ್ತೇವೆ ಎಂದು ಹೇಳಿದ ವಿಂಗರ್ ನಂಬರ್ ನನಗೆ ಗೊತ್ತಿಲ್ಲ ಮತ್ತು ಅದರ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ಹಳ್ಳದಮನುಗನಹಳ್ಳಿಗೆ ಹೋಗಬೇಕಾದರೆ ಕ್ಯಾತನಹಳ್ಳಿ ಮತ್ತು ಗಂಗಡಹೊಸಹಳ್ಳಿ ಗ್ರಾಮಗಳನ್ನು ದಾಟಿಕೊಂಡು ಹೋಗಬೇಕಾಗುತ್ತದೆ ಎಂದರೆ ಸರಿ. ಹಳ್ಳದಮನುಗನಹಳ್ಳಿಯಿಂದ ಕ್ಯಾತನಹಳ್ಳಿಗೆ ಸುಮಾರು 10 ಕಿ.ಮೀ. ದೂರವಿರುತ್ತದೆ. ಹಳ್ಳದಮನುಗನಹಳ್ಳಿಯಿಂದ ವಾಪಸ್ ಬರುವಾಗ ಕ್ಯಾತನಹಳ್ಳಿ ಗೇಟ್ ಬಳಿ ಗಂಗಡಹೊಸಹಳ್ಳಿಯಲ್ಲಿ ಆಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಬಾತ್ಮೀದಾರರು ಫೋನ್ ಮೂಲಕ ಚಾಸಾ–1 ರವರಿಗೆ ತಿಳಿಸಿರುತ್ತಾರೆ. ಗಂಗಡಹೊಸಹಳ್ಳಿಯ ಅರಳೀಮರದ ಹತ್ತಿರ ಪೆಟ್ಟಿಗೆ ಅಂಗಡಿಯ ಸುತ್ತ–ಮುತ್ತ ಶಾಲೆ, ಬಸ್ ನಿಲ್ದಾಣ ಮತ್ತು ವಾಸದ ಮನೆಗಳು ಇರುತ್ತವೆ ಎಂದರೆ ಸರಿ. ನಾವು ದಾಳಿ ಮಾಡಿರುತ್ತೇವೆ ಎಂದು ಹೇಳಿದ ಅಂಗಡಿಯ ಮಾಲೀಕರ ಬಗ್ಗೆ ಚಾಸಾ–1 ರವರು ಮಾಹಿತಿ ಪಡದಿರುತ್ತಾರೆ. ಸದರಿ ಪೆಟ್ಟಿಗೆ ಅಂಗಡಿ ಯಾರ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದು ಮಹಜರ್ ನಲ್ಲಿ ನಮೂದಿಸಿಲ್ಲ. ನಾವು ದಾಳಿ ಮಾಡಿರುತ್ತೇವೆ ಎಂದು ಹೇಳಿದ ಸ್ಥಳದಲ್ಲಿ 02–03 ಪೆಟ್ಟಿಗೆ ಅಂಗಡಿಗಳು ಇದ್ದವು. ನಾವು 01 ಪೆಟ್ಟಿಗೆ ಅಂಗಡಿಯನ್ನು

ಪರಿಶೀಲಿಸಿರುತ್ತೇವೆ. ಆರೋಪಿಗು ಮತ್ತು ನಾವು ದಾಳಿ ಮಾಡಿರುತ್ತೇವೆಂದು ಹೇಳಿದ ಪೆಟ್ಟಗೆ ಅಂಗಡಿಗು ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಆರೋಪಿಯನ್ನು ಯಾವತ್ತು ವಿಚಾರಣೆ ಮಾಡಿಲ್ಲ ಮತ್ತು ಆರೋಪಿ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲುಗಳಿಗು ಮತ್ತು ಆರೋಪಿಗು ಯಾವುದೇ ಸಂಬಂಧವಿಲ್ಲ ಮತ್ತು ಆರೋಪಿಯ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಆರೋಪಿಯನ್ನು ಬಂಧಿಸಿಲ್ಲ ಎಂದರೆ ಸರಿಯಲ್ಲ. ಮಹಜರ್ ನ್ನು ಚಾಸಾ–8 ಬರೆದಿರುತ್ತಾರೆ. ಮಹಜರ್ ಬರೆಯಲು ಚಾಸಾ–1 ಹೇಳಿರುತ್ತಾರೆ. ಮುದ್ದೆಮಾಲುಗಳ ಮೇಲೆ ಅಂಟಿಸಿರುವ ಮಾದರಿ ಚೀಟಿಗಳ ಮೇಲೆ ನನ್ನ ಸಹಿ ಪಡೆದಿಲ್ಲ. ನಾವು ಸ್ಥಳದಲ್ಲಿ ಯಾವುದೇ ಮಹಜರ್ ಮಾಡಿಲ್ಲ ಮತ್ತು ಅದನ್ನು ಠಾಣೆಯಲ್ಲಿಯೇ ಕುಳಿತು ತಯಾರಿಸಿದ್ದು, ನಾನು ಠಾಣೆಯಲ್ಲಿಯೇ ಮಹಜರ್ ಗೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ನಾವು ದಾಳಿ ಮಾಡಿದಾಗ ಬೇರೆ ಯಾರು ಸಾರ್ವಜನಿಕರು ಅಲ್ಲಿ ಇರಲಿಲ್ಲ. ಸಾಮಾನ್ಯವಾಗಿ 02 ಪೆಟ್ಟಿಗೆ ಅಂಗಡಿಗಳು ಅಕ್ಕ–ಪಕ್ಕ ಇದ್ದಾಗ ಪೋಲೀಸ್ ಅಧಿಕಾರಿಳು 01 ಪೆಟ್ಟಿಗೆ ಅಂಗಡಿಗೆ ದಾಳಿ ನಡೆಸಿದ ಸಂದರ್ಭದಲ್ಲಿ ಇನ್ನೊಂದು ಪೆಟ್ಟಿಗೆ ಅಂಗಡಿಯವರು ಬಾಗಿಲು ಹಾಕಿಕೊಂಡು ಓಡಿ ಹೋಗುತ್ತಾರೆಂದರೆ ಸರಿ ಆದರೆ ನಾವು ದಾಳಿ ನಡೆಸಿದ ಸಂದರ್ಭದಲ್ಲಿ ಎರಡೂ ಪೆಟ್ಟಿಗೆ ಅಂಗಡಿಯವರು ಇದ್ದರು. ನಾನು ನನ್ನ ಮೇಲಾಧಿಕಾರಿಗಳ ಮುಂದೆ ಯಾವುದೇ ಹೇಳಿಕೆ ನೀಡದಿದ್ದರು ಚಾಸಾ–1 ರವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಗಂಗಡಹೊಸಹಳ್ಳಿಯಿಂದ ವಾಪಸ್ ಠಾಣೆಗೆ ಬಂದಾಗ ಸಂಜೆ 07.30 ಗಂಟೆಯಾಗಿತ್ತು.

ಆರೋಪಿ ಯಾವುದೇ ತಪ್ಪು ಮಾಡದಿದ್ದರೂ, ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ–ಅಂಶಗಳಿಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಯಾವುದೇ ಮುದ್ದೆಮಾಲುಗಳನ್ನಾಗಲೀ, ಆರೋಪಿಯನ್ನಾಗಲೀ ವಶಕ್ಕೆ ಪಡೆದುಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ಮುದ್ದೆಮಾಲುಗಳಿಗೂ, ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲವೆಂದರೆ ಸರಿಯಲ್ಲ.

<u>**ಮರು ವಿಚಾರಣೆಃ ಇಲ್ಲ.**</u>

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**